ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ

**ಸಿ.ಸಿ.33/2023**

| | | |
|---|---|---|
| ಸಾಕ್ಷಿದಾರರ ಹೆಸರು : | ಡಾ. ವಿಶ್ವನಾಥ ವಿ.ಆರ್. | ಪ್ರಮಾಣ ವಚನ ಬೋಧಿಸಿದ<br>ದಿನಾಂಕ: 05**.02.2026** |
| ತಂದೆಯ ಹೆಸರು : | ರಾಮಪ್ಪ ಕೆ. | |
| ವಯಸ್ಸು : | 41 ವರ್ಷ | ಪಿ.ಡಬ್ಲ್ಯೂ-**01** |
| ಉದ್ಯೋಗ : | ಶಸ್ತ್ರ ಚಿಕಿತ್ಸಕ | ಸಿ.ಡಬ್ಲ್ಯೂ-**06** |
| ವಾಸ ಸ್ಥಳ : | ಹೊಸದುರ್ಗ | |

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ :-**

1. ನಾನು, ಹೊಸದುರ್ಗ ತಾಲ್ಲೂಕ ಸಾರ್ವಜನಿಕ ಆಸ್ಪತ್ರೆಯಲ್ಲಿ 2020 ರಿಂದ ಇಲ್ಲಿಯವರೆಗೂ ಶಸ್ತ್ರ ಚಿಕಿತ್ಸಕನಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

ದಿಃ 27.06.2021 ರಂದು ಸಾಯಂಕಾಲ 5-00 ರ ಸಮಯದಲ್ಲಿ ಚಾಸಾ-1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು, ನಾನು ಚಾಸಾ 01 ರವರ ಪರೀಕ್ಷಿಸಲಾಗಿ, ಚಾಸಾ-1 ರವರಿಗೆ ಬಲ ಕಣ್ಣಿನ ಕೆಳಭಾಗದಲ್ಲಿ ಕತ್ತರಿಸಿದ ಗಾಯ 1.5X1 cm ಮತ್ತು ಎಡಭುಜದಲ್ಲಿ ನೋವು ಇತ್ತು. ಆ ಕುರಿತು ನಾನು ಚಿಕಿತ್ಸೆಯನ್ನು ನೀಡಿ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಸಾಕ್ಷಿ ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 01 ಎಂದು ಹಾಗೂ ಸಾಕ್ಷಿಯ ಸಹಿಯನ್ನು 1 (ಎ) ಎಂದು ಗುರುತಿಸಲಾಯಿತು. ನಿಪಿಃ 1 ರಲ್ಲಿರುವ ಗಾಯಳು ನನ್ನ ಅಭಿಪ್ರಾಯದಲ್ಲಿ ಸಾದಾ ಸ್ವರೂಪದ ಗಾಯಗಳಾಗಿರುತ್ತವೆ. ಕೋಲು ಮತ್ತು ಕಲ್ಲಿನಿಂದ ಹೊಡೆದರೆ ನಿಪಿಃ 01 ರಲ್ಲಿ ಹೇಳಿರುವಂತಹ ಗಾಯಗಳು ಆಗಬಹುದು.

<u>ಪಾಟೀಸವಾಲು: ಆರೋಪಿಗಳ ಪರ: ಶ್ರೀ ಡಿ ಎನ್ ಎಂ ವಕೀಲರಿಂದ:</u>

ಯಾರ್ಯಾರು, ಯಾವ ಸ್ಥಳದಲ್ಲಿ ಹಲ್ಲೆ ಮಾಡಿರುತ್ತಾರೆ ಎಂದು ನಿರ್ದಿಷ್ಟವಾಗಿ ನನ್ನ ಮುಂದೆ ಹೇಳಿಲ್ಲ. ಕಲ್ಲಿನ ಮೇಲೆ ಬಲವಗಗಿ ಬಿದ್ದರೆ ನಿಪಿಃ 1 ರಲ್ಲಿ ಹೇಳಿರುವ ಮೊದಲನೇ ಗಾಯಗಳು ಆಗುತ್ತವೆ ಎನ್ನುವುದು ನಿಜ. ನಿಪಿಃ 01 ರಲ್ಲಿ ಗಾಯದ ಅವಧಿಯನ್ನು ಬರೆದಿಲ್ಲ. ಚಾಸಾ -1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ . 5-00 ಗಂಟೆಯಿಂದ 5-30 ರವರೆಗೆ ಚಿಕಿತ್ಸೆಯನ್ನು ನೀಡಿರುತ್ತೇನೆ. ಹಲ್ಲೆಯ ಕೇಸುಗಳಿಗೆ ಸಂಬಂಧಿದಂತೆ ಪೊಲೀಸರಿಗೆ ಮಾಹಿತಿಯನ್ನು ಕೊಡುತ್ತೇವೆ ಎನ್ನುವುದು ನಿಜ. ಪೊಲೀಸರಿಗೆ ನಾವು ಮಾಹಿತಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.